# ವರ್ಷ ವಿಜ್ಞಾನ!

**ಮೊದಲನೆ ಪುಟದಿಂದ**

ಅಲ್ಲಿಂದ ಈಚೆಗೆ ಅವರು ಮಾಡಿರುವ ಅಂದಾಜು ಮಳೆಯ ಲೆಕ್ಕಾಚಾರ 100ಕ್ಕೆ 90–95ರಷ್ಟು ಸರಿಯಾಗಿದೆ. ಈ ಮಾತಿಗೆ ಆಧಾರವಿದೆ. ಉದಾಹರಣೆ ಇಲ್ಲಿದೆ ನೋಡಿ. ಇವರು 2009ರಲ್ಲಿ ಹಳೆ ಮೈಸೂರು ಭಾಗದಲ್ಲಿ 60 ಸೆಂಟಿ ಮೀಟರಿಗಿಂತ ಜಾಸ್ತಿ ಮಳೆ ಬರುವ ವೈಜ್ಞಾನಿಕ ಭವಿಷ್ಯ ಸಿದ್ಧಪಡಿಸಿದ್ದರು; ಅದರಂತೆ ಆ ವರ್ಷ ಅಷ್ಟೇ ಮಳೆ ಬಂತು. 2010ರಲ್ಲಿ 75 ಸೆಂ.ಮೀ. ಗಿಂತೆ ಹೆಚ್ಚು ಮಳೆಯ ಲೆಕ್ಕ ಬರುತ್ತದೆಂದಿದ್ದರು; ಅದರಂತೆ ಅಷ್ಟೇ ಮಳೆ ಸುರಿಯಿತು; 2009ರಲ್ಲಿ ಕರಾವಳಿಯಲ್ಲಿ 290 ಸೆಂ.ಮೀ. ವರ್ಷಧಾರೆಯ ವೈಜ್ಞಾನಿಕ ಮುನ್ನೋಟ ಇವರದಾಗಿತ್ತು; ಕೊನೆಗೆ ನೋಡಿದಾಗ ಇದಕ್ಕಿಂತ ಒಮದೆರಡು ಇಂಚು ಮಾತ್ರ ಮಳೆ ಕಡಿಮೆಯಾಗಿತ್ತಷ್ಟೆ

ಈ ಮುನ್ನೋಟದಿಂದ ಭಾರೀ ಪ್ರಯೋಜನವಿದೆ. ಅದೇನೆಂದರೆ, 2012ರಲ್ಲಿ ಮುಂಗಾರು ಕೈ ಕೊಡುತ್ತದೆ ಅಂತಿಟ್ಟುಕೊಳ್ಳಿ. ಅದು ಮೊದಲೇ ಗೊತ್ತಾದರೆ ಬರಗಾಲದ ದುಷ್ಪರಿಣಾಮ ತಡೆಯಲು ಏನೇನು ಕ್ರಮ ಬೇಕೋ ಅದನ್ನೆಲ್ಲ ಸರಕಾರ ಮೊದಲೇ ಮಾಡಿಕೊಳ್ಳಬಹುದು. ಹಾಗೆಯೇ ಹುಚ್ಚುಮಳೆಯ ಮುನ್ನೋಟ ಸಿಕ್ಕಿತೆನ್ನಿ, ಆಗ ಪ್ರವಾಹ ಕಟ್ಟಿಟ್ಟ ಬುತ್ತಿ. ಅದನ್ನು ತಡೆಯಲು, ಪ್ರಾಣಹಾನಿ ಆಗದಂತೆ ನೋಡಿಕೊಳ್ಳಲು, ಮುರುಕಲು ಮನೆಗಳಲ್ಲಿರುವವರನ್ನು ಸ್ಥಳಾಂತರಿಸಲು, ಗಂಜಿ ಕೇಂದ್ರಗಳನ್ನು ತೆರೆಯಲು, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು, ನದಿ ತಟಗಳಲ್ಲಿ ಜೀವರಕ್ಷಕ ಸಾಧನಗಳನ್ನು ಸಜ್ಜಾಗಿ ಇಟ್ಟುಕೊಳ್ಳಲು ಬೇಕಾಗುವ ಸಿದ್ಧತೆಗಳನ್ನೆಲ್ಲ ಒಂದು ಚೂರೂ ಎಡವಟ್ಟಾಗದಂತೆ ಮಾಡಿಕೊಳ್ಳಬಹುದು. ಆದರೆ ಈಗ ಹೀಗಾಗುತ್ತಿಲ್ಲ. ಅಲ್ಯಾರೋ ಕೃಷ್ಣಾ ನದಿಯಲ್ಲಿ ಹತ್ತು ಜನ ಮುಳುಗಿದ್ದಾರೆಂದರೆ, ಪರಿಹಾರ ಕಾರ್ಯಾಚರಣೆ ಶುರುವಾಗುವ ಹೊತ್ತಿಗೆ ಇನ್ನೂ ಇಪ್ಪತ್ತೈದು ಜನ ಜಲಸಮಾಧಿಯಾಗಿರುತ್ತಾರೆ; ಬರದ ಅಂದಾಜು ಮಾಡಿ ಅಧಿಕಾರಿಗಳು ತಮ್ಮ ಭೇಟಿಯ ಮುಹೂರ್ತ ಕಟ್ಟುವ ಹೊತ್ತಿಗೆ ಊರಿಗೆ ಊರೇ ಗುಳೆ ಎದ್ದು ಹೋಗಿರುತ್ತದೆ. ■

## ಕೈಕೊಡುತ್ತಿರುವ ಪಂಚಾಂಗ



ಈಗ ರೈತರು ಪಂಚಾಂಗದ ಆಧಾರದ ಮೇಲೆ ಮಳೆ ನಕ್ಷತ್ರಗಳ ಲೆಕ್ಕ ಹಾಕುತ್ತಿದ್ದಾರೆ ತಾನೇ? ಈ ಲೆಕ್ಕಾಚಾರವೇ ಅವರಿಗೆ ಕೈಕೊಟ್ಟಿರುವುದು. ವರಾಹಮಿಹಿರ 'ಬೃಹತ್ ಸಂಹಿತೆ' ಬರೆದಾಗ ಈ ಲೆಕ್ಕಾಚಾರ ಸರಿಯಾಗೇ ಇತ್ತು. ಆದರೆ 400 ವರ್ಷದಿಂದ ಈಚೆಗೆ ಉತ್ತರಾಯಣ ಪುಣ್ಯಕಾಲದ ಲೆಕ್ಕಾಚಾರವೇ ತಪ್ಪಾಗಿ ನಡೆಯುತ್ತಿದೆ. ಈಗ ನಾವೆಲ್ಲ ಉತ್ತರಾಯಣ ಬರೋದು ಜನವರಿ 14ಕ್ಕೆ ಅಂದುಕೊಂಡಿದ್ದೀವಿ. ಆದರೆ ಅದು ನಿಜವಾಗಿ ಘಟಿಸುವುದು ಡಿಸೆಂಬರ್ 21, ತಪ್ಪಿದರೆ 22ಕ್ಕೆ ಅನ್ನುತ್ತಾರೆ ಆರ್.ಎನ್. ಅಯ್ಯಂಗಾರ್. ಅಂದರೆ 21 ದಿವಸ ಹಿಂದಕ್ಕೆ ಹೋಗಬೇಕು. ಆದರೆ ಅದು ಹೇಗೋ ಉತ್ತರಾಯಣ ಪುಣ್ಯಕಾಲವನ್ನೂ ಮಕರ ಸಂಕ್ರಾಂತಿಯನ್ನೂ ತಪ್ಪಾಗಿ ಒಂದರ ಜತೆ ಒಂದನ್ನಿಡಲಾಗುತ್ತಿದೆ. ಹೀಗಾಗಿ ಉದಾಹರಣೆಗೆ ಮೃಗಶಿರಾ ಮಳೆ ಇವತ್ತು ಹುಟ್ಟುತ್ತೆ ಅಂತ ಪಂಚಾಂಗದಲ್ಲಿ ಹೇಳಿದ್ದರೆ, ಅದು ಇವತ್ತು ಹುಟ್ಟೋದಿಲ್ಲ, ವಾಸ್ತವವಾಗಿ 21 ದಿನ ಮೊದಲೇ ಹುಟ್ಟಿ ಮುಗಿದು ಹೋಗಿರುತ್ತೆ ಅಂತಾರೆ ಈ ನಮ್ಮ ವಿಜ್ಞಾನಿ. ಅಲ್ಲಿಗೆ ರೈತನಿಗೆ ಇಲ್ಲೂ ಮೋಸವಾಗುತ್ತಿದೆ ಅಂತಾಯ್ತು! ಇದನ್ನು ಹೇಗಾದರೂ ಮಾಡಿ ಸರಿಪಡಿಸಬೇಕು. ಆದರೆ, ಪಂಚಾಂಗ ಬರೆಯುವವವರು ಇದಕ್ಕೆಲ್ಲ ಒಪ್ಪುತ್ತಾರಾ?